ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	487
2	ಸದಸ್ಯರ ಹೆಸರು	:	ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)
3	ಉತ್ತರಿಸುವ ದಿನಾಂಕ	:	10.12.2020
4	ಉತ್ತರಿಸುವ ಸಚಿವರು	:	ಸನ್ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	2014ನೇ ಸಾಲಿನಿಂದ ಇಲ್ಲಿಯವರೆಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗಳಿಗೆ ನೀಡಿರುವ ಅನುದಾನ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)	2014ನೇ ಸಾಲಿನಿಂದ ಇಲ್ಲಿಯವರೆಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ನೀಡಿರುವ ಅನುದಾನ ಮಾಹಿತಿ ಈ ಕೆಳಗಿನಂತೆ.

(ರೂ.ಕೋಟಿಗಳಲ್ಲಿ)

ಆರ್ಥಿಕ ವರ್ಷ	ಸರ್ಕಾರದಿಂದ ಹಂಚಿಕೆಯಾದ ಅನುದಾನ	ಸರ್ಕಾರದಿಂದ ಮಂಡಳಿಗೆ ಬಿಡುಗಡೆಯಾದ ಅನುದಾನ
1	2	3
2014-15	600.00	300.00
2015-16	1000.00	750.00
2016-17	1000.00	750.00
2017-18	1000.00	800.00
2018-19	1000.00	1000.00
2019-20	1500.00	1125.00
2020-21 (30.11.2020ರ ಅಂತ್ಯಕ್ಕೆ)	1131.86	544.04

ಕ್ರ.ಸಂ	ಪ್ರಶ್ನೆ	ಉತ್ತರ
(ಆ)	2014ನೇ ಸಾಲಿನಿಂದ ಇಲ್ಲಿಯವರೆಗೆ ಅನುದಾನ ಬಿಡುಗಡೆಯಾಗಿ ಖರ್ಚಾದ ಅನುದಾನ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)	2014ನೇ ಸಾಲಿನಿಂದ ಇಲ್ಲಿಯವರೆಗೆ ಅನುದಾನ ಬಿಡುಗಡೆಯಾಗಿ ಖರ್ಚಾದ ಅನುದಾನದ ವಿವರ ಈ ಕೆಳಗಿನಂತೆ.

(ರೂ.ಕೋಟಿಗಳಲ್ಲಿ)

ಆರ್ಥಿಕ ವರ್ಷ	ಸರ್ಕಾರದಿಂದ ಮಂಡಳಿಗೆ ಬಿಡುಗಡೆಯಾದ ಅನುದಾನ	ಮಂಡಳಿಯಿಂದ ಖರ್ಚಾದ ಅನುದಾನ
1	2	3
2014-15	300.00	322.59
2015-16	750.00	493.66
2016-17	750.00	960.02
2017-18	800.00	450.32

		2018-19	1000.00	1193.54
		2019-20	1125.00	1246.81
		2020-21 (30.11.2020ರ ಅಂತ್ಯಕ್ಕೆ)	544.04	553.45

(ಇ)	ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಲ್ಲಿ ನಿಗದಿತ ಅನುದಾನ ಖರ್ಚಾಗದೇ ಇರಲು ಕಾರಣಗಳೇನು; ಆಯಾ ಅನುದಾನ ಅದೇ ವರ್ಷ ಖರ್ಚಾಗಲು ಸರ್ಕಾರ ಕೈಗೊಂಡಿರುವ ಕ್ರಮವೇನು?	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ 6 ಜಿಲ್ಲೆಗಳು ಸೇರ್ಪಡೆಗೊಂಡಿದ್ದು, ಮೈಕ್ರೋ ಹಾಗೂ ಮ್ಯಾಕ್ರೋ ಯೋಜನೆಯಡಿ ಕ್ರಿಯಾ ಯೋಜನೆ ರೂಪಿಸಲಾಗುತ್ತಿದ್ದು ಜನಪ್ರತಿನಿಧಿಗಳು ಅಗತ್ಯ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಸೂಚಿಸದಿರುವುದು ಹಾಗೂ ಅನುಮೋದನೆಗೊಂಡ ಕಾಮಗಾರಿಗಳಿಗೆ ಸ್ಥಳಾವಕಾಶದ ಸಮಸ್ಯೆಗಳು ಎದುರಾಗುತ್ತಿರುವುದು ಮತ್ತು ಅನುಮೋದನೆಗೊಂಡ ಕಾಮಗಾರಿಗಳು ಕೆಲವು ಸಂದರ್ಭಗಳಲ್ಲಿ ಬದಲಾವಣೆಯಾಗುತ್ತಿರುವುದು, ಕಾಮಗಾರಿಗಳ ಅಂದಾಜು ತಯಾರಿಕೆ, ಆಡಳಿತಾತ್ಮಕ ಅನುಮೋದನೆ ಟೆಂಡರ್ ಪ್ರಕ್ರಿಯೆಯಲ್ಲಿ ಬಿಡ್‌ದಾರರು ಭಾಗವಹಿಸದೇ ಇರುವುದು ಹಾಗೂ ಕಾಮಗಾರಿಗಳನ್ನು ಟೆಂಡರ್ ಮೂಲಕ ಪಡೆದ ಗುತ್ತಿಗೆದಾರರು ಕಾಮಗಾರಿಗಳ ಅನುಷ್ಠಾನದಲ್ಲಿ ಹಲವಾರು ಕಾರಣಗಳಿಂದ ವಿಳಂಬ ಮಾಡುತ್ತಿರುವುದು, ಹೀಗೆ ಹಲವು ಕಾರಣಗಳಿಂದ ಅನುಮೋದನೆಗೊಂಡ ಕಾಮಗಾರಿಗಳು ಅದೇ ವರ್ಷ ಪೂರ್ಣವಾಗದೇ ಇರುವ ಕಾರಣದಿಂದ ಈ ಹಿಂದೆ ಅನುದಾನವು ವೆಚ್ಚವಾಗದೇ ವಿಳಂಬವಾಗುತ್ತಿತ್ತು ಆದರೆ 2018-19 ರಿಂದ ಆಯಾ ಅನುದಾನ ಅದೇ ವರ್ಷ ಖರ್ಚು ಆಗುತ್ತಿದೆ. ಸರ್ಕಾರವು ಕ್ರಿಯಾಯೋಜನೆಯನ್ನು ನಿಗದಿತ ಕಾಲಾವಧಿಯಲ್ಲಿ ಅನುಮೋದನೆ ನೀಡುತ್ತಿದ್ದು ಅಂದಾಜು ತಯಾರಿಕೆ ಆಡಳಿತಾತ್ಮಕ ಅನುಮೋದನೆಗೆ ಸಂಬಂಧಿಸಿದಂತೆ ರೂ.10.00ಕೋಟಿ ವರೆವಿಗೆ ಮಂಡಳಿಗೆ ಅಧಿಕಾರ ನೀಡಿದ್ದು, ಪಾರದರ್ಶಕವಾಗಿ ಶೀಘ್ರದಲ್ಲಿ ಉತ್ಕೃಷ್ಟವಾಗಿ ಅನುಷ್ಠಾನವಾಗಲು ಹಾಗೂ ನಿಗದಿತ ಕಾಲಾವಧಿಯಲ್ಲಿ ವೆಚ್ಚಭರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸಂಖ್ಯೆ: ಪಿಡಿಎಸ್ 75 ಹೆಚ್‌ಕೆಡಿ 2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ